**ಸಾಕ್ಷಿಗೆ ದಿನಾಂಕ:02-09-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ SSC ವಕೀಲರಿಂದ ::**

ದಾವಾ ಸರ್ವೇ ನಂಬರ್ 99 ರಲ್ಲಿ ಒಟ್ಟು ವಿಸ್ತೀರ್ಣ 20 ಎಕರೆ 2 ಗುಂಟೆ ಜಮೀನು ಇದ್ದು, ಅದರಲ್ಲಿ 5 ಎಕರೆ ಸರ್ಕಾರಿ ಜಮೀನು ಇದ್ದು, ಉಳಿದ ವಿಸ್ತೀರ್ಣದಲ್ಲಿ ನನ್ನನ್ನು ಸೇರಿದಂತೆ ಇತರೇ ವ್ಯಕ್ತಿಗಳು ಇರುತ್ತಾರೆ. ಸರ್ವೇ ನಂಬರ್ 99 ರಲ್ಲಿ ಸ್ವಲ್ಪ ಭಾಗದಷ್ಟು ಪೋಡಿ ಆಗಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತು ಇನ್ನು ಸಹ ನಮಗೆ ಮಂಜೂರಾತಿ ಆಗಿರುವುದಿಲ್ಲ, ಆದರೆ ಮಂಜೂರಾತಿ ಕೋರಿ ನಾವು ಅರ್ಜಿಯನ್ನು ಸಲ್ಲಿಸಿರುತ್ತೇವೆ. ದಾವಾ ಶೆಡ್ಯೂಲ್ ಸ್ವತ್ತು ಇಲ್ಲಿಯವರೆಗೂ ಹದ್ದುಬಸ್ತು ಆಗಿರುವುದಿಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಂಜೂರಾತಿ ಕೋರಿ ನನ್ನ ತಂದೆ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು. ನನ್ನ ಜಮೀನಿನ ಸ್ವಾಧೀನಕ್ಕೆ ಪ್ರತಿವಾದಿಯು ಯಾವುದೇ ತಂಟೆತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ DDLR ರವರ ಸಮಕ್ಷಮ ಒಂದು ಪ್ರಕರಣ ನಡೆದಿರುತ್ತದೆ ಎಂದರೆ ಸರಿ. ಸದರಿ ಪ್ರಕರಣವು ಪ್ರತಿವಾದಿಯ ಪರವಾಗಿ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರದಲ್ಲಿ JDLR ಮೈಸೂರು ರವರ ಸಮಕ್ಷಮ ನಾನು ಮೇಲ್ಮನವಿ ಸಲ್ಲಿಸಿದ್ದು ಅದು ಸಹ ವಜಾ ಆಗಿರುತ್ತದೆ ಎಂದರೆ ಸರಿ. ನನಗೆ ಸ್ವಂತವಾಗಿ 2 ಎಕರೆ 26 ಗುಂಟೆ ಜಮೀನು ಇರುತ್ತದೆ. ಸಾಮಾನ್ಯವಾಗಿ ಭೂಮಿ ಇಲ್ಲದ ವ್ಯಕ್ತಿಗಳಿಗೆ ಸರ್ಕಾರದಿಂದ ಜಾಗವನ್ನು ಮಂಜೂರ ಮಾಡಿಕೊಡಲಾಗುತ್ತದೆ ಎಂದರೆ ಸರಿ. ಸರ್ವೇ ನಂಬರ್ 99 ರಲ್ಲಿ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸದರಿ ಸರ್ವೇ ನಂಬರ್ ನಲ್ಲಿ ಜಮೀನು ಇದ್ದು, ಅವರು ಅದಕ್ಕೆ ಹದ್ದುಬಸ್ತು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಯಾವುದೇ ಜಮೀನಿನ ಸ್ವಾಧೀನಕ್ಕೆ ತೊಂದರೆ ಕೊಡದಿದ್ದರೂ ಸುಳ್ಳು ಕತೆ ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: